93ಕ್ಕೆ ಮಾಡಬೇಕಾಗಿತ್ತು ಮಾಡಿಲ್ಲ. ಪ್ರತಿ ದಿವಸಕ್ಕೆ 10 ರೂಪಾಯಿಯಂತೆ ದಂಡ ವಿಧಿಸಲಾಗಿದೆ. ಜೂನ್ 94ಕ್ಕೆ ಈ ಕೆಲಸವನ್ನು ಮಾಡಿ ಮುಗಿಸಲು ಸರ್ಕಾರ ಕೆಲಸ ತೀವ್ರಗತಿಯಿಂದ ಮಾಡುತ್ತಿದೆ ಎಂದು ಹೇಳಿದ್ದೇನೆ.

ಗಡಿ ಪ್ರದೇಶಾಭಿವೃದ್ಧಿ ಕೈಗೊಂಡಿರುವ ಕ್ರಮಗಳು

669 - ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಗಡಿ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಇದಕ್ಕಾಗಿ ನಿಗಧಿಗೊಳಿಸಿದ ಹಣವೆಷ್ಟು?

ಶ್ರೀ ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು) :

ಅ) ಗಡಿ ಪ್ರದೇಶದ ತಾಲ್ಲೂಕುಗಳಲ್ಲಿ ಸಾಮಾಜಿಕ, ಆರ್ಥಿಕ ಒಳ ಹಂದರವನ್ನು ರಚಿಸಿ ತನ್ಮೂಲಕ ಗಡಿ ತಾಲ್ಲೂಕುಗಳ ಸಾಮಾಜಿಕ, ಆರ್ಥಿಕ ಬೆಳವಣಿಗೆಯನ್ನು ತ್ವರಿತಗೊಳಿಸುವುದಕ್ಕಾಗಿ ಈ ಕಾರ್ಯಕ್ರಮವನ್ನು 1990-91ನೇ ಸಾಲಿನಿಂದ ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ ರಾಜ್ಯದ 15 ಜಿಲ್ಲೆಗಳ 52 ಗಡಿ ತಾಲ್ಲೂಕುಗಳಿಗೆ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ. 1993-94ನೇ ಸಾಲಿಗೆ 15.00 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ನಿಗಧಿಪಡಿಸಲಾಗಿದೆ. 1990-91ರಲ್ಲಿ 5.00 ಕೋಟಿ ರೂ. 1991-92ರಲ್ಲಿ 10.00 ಕೋಟಿ ರೂ. ಮತ್ತು 1992-93ರಲ್ಲಿ 15.00 ಕೋಟಿ ರೂ.ಗಳನ್ನು ನಿಗಧಿಪಡಿಸಲಾಗಿತ್ತು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಗಡಿನಾಡು ಅಭಿವೃದ್ಧಿಗೆ ಕೇವಲ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬೆಳವಣಿಗೆಯಾಗತಕ್ಕಂಥ ಒಂದೇ ವಿಚಾರ ಅಂತ ಅಲ್ಲ, ಗಡಿ ಬೆಳವಣಿಗೆಗೆ ಒಂದು ಹೊಸ ಚಿಂತನೆ ಆಗಬೇಕಾಗಿದೆ. ಆ ಹೊಸ ಚಿಂತನೆ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಕೇವಲ ಒಂದೆರಡು ರಸ್ತೆ ಮಾಡಿ, ಕಟ್ಟಡ ಕಟ್ಟತಕ್ಕಂಥಾದ್ದು ಅಲ್ಲ. ಈ ಗಡಿ ಬೆಳವಣಿಗೆ ಅಂದರೆ ಅದಕ್ಕೊಂದು ವಿಶೇಷವಾದಂತಹ ಕಾರ್ಯಕ್ರಮ, ಒಂದು ಯೋಜನೆ, ಭಾಷೆಯ ಬಾಂಧವ್ಯ ಅಲ್ಲಿಯ ಬೆಳವಣಿಗೆ ಆ ಗಡಿಯಲ್ಲಿ ಏನೇನು ಆಗಬೇಕು ಈ ದಿಕ್ಕಿನಲ್ಲಿ ಸರ್ಕಾರ ಏನಾದರೂ ಯೋಜನೆ ಮಾಡಿದೆಯೇ? ಇದು ಬಹಳ ಮುಖ್ಯವಾದುದು. ಪ್ರತಿ ವರ್ಷ ವೀರೇಂದ್ರ ಪಾಟೀಲರ ಕಾಲದಲ್ಲಿ 5 ಕೋಟಿ ರೂಪಾಯಿ ಕೊಟ್ಟಿರಿ; ಆಮೇಲೆ 10 ಕೋಟಿ ಕೊಟ್ಟರು. ಬಂಗಾರಪ್ಪನವರ ಕಾಲದಲ್ಲಿ 15 ಕೋಟಿ ಕೊಟ್ಟರು. ಒಂದು ತಿಂಗಳಿಗೆ ಇಲ್ಲಿ ಕೋಟಿ ರೂಪಾಯಿ ಕೊಟ್ಟರೂ ಒಂದು ವರ್ಷಕ್ಕೆ 25 ಲಕ್ಷ ರೂಪಾಯಿ ನೀವು ಕೊಡಬೇಕು. ಆದರೆ ನಾನು ನಿಮಗೆ ಹೇಳುವುದೇನೆಂದರೆ, ಆ ಬಾಷೆಯ ಬೆಳವಣಿಗೆ. ಅಲ್ಲಿಯ ಅನೇಕ ಕನ್ನಡ ಶಾಲೆಗಳ ಪರಿಸ್ಥಿತಿ ಏನು? ಕನ್ನಡ ಭಾಷೆಯ ಬೆಳವಣಿಗೆಯ ಪರಿಸ್ಥಿತಿ ಏನು? ಆ ಗಡಿ ಪ್ರದೇಶಗಳನ್ನು ನಾವು ಬೆಳವಣಿಗೆ ಮಾಡಿಲ್ಲ. ಪಕ್ಕದ ರಾಜ್ಯದವರು ಅವರನ್ನು ಕಡೆಗಾಣಿಸಿದ್ದಾರೆ. ಈ ದೃಷ್ಟಿಯಿಂದ ನಮ್ಮ ಗಡಿ ಪ್ರದೇಶಗಳು ತೀವ್ರವಾಗಿ ತೊಂದರೆಗೆ ಸಿಕ್ಕಿವೆ. ಆದ್ದರಿಂದ ಈ ಬೆಳವಣಿಗೆ ಬಗ್ಗೆ ಒಂದು ಹೊಸ ಚಿಂತನೆ ಏನಾದರೂ ಸರ್ಕಾರಕ್ಕೆ ಇದೆಯೇ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ್ (ಅಚ್ಚುಕಟ್ಟು ಮತ್ತು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳು ಬಹಳ ಸೂಕ್ತವಾಗಿವೆ. ಇದರ ಮೇಲೆ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಕೇವಲ ಕಟ್ಟಡಗಳು ಮತ್ತು ರಸ್ತೆಗಳು ಮಾತ್ರ ಅಲ್ಲ, ಶಿಕ್ಷಣ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು, ಅಂಗನವಾಡಿ ಕೇಂದ್ರಗಳು, ಆರೋಗ್ಯ, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಗೃಹ ನಿರ್ಮಾಣ, ಬಡತನ

ರೇಖೆಗಿಂತ ಕಳಿಗಿರುವ ತಾಂಡಗಳಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮನೆಗಳಿಗೆ ವಿದ್ಯುದ್ದೀಕರಣ, ಪಶುವೈದ್ಯ ಚಿಕಿತ್ಸಾಲಯಗಳು, ಗ್ರಾಮೀಣ ನೀರು ಪೂರೈಕೆ. ಇದರ ಬದಲಿಗೆ ಏನು ಮಾಡಿದ್ದೇವೆಂದರೆ ಅವರು ಹೇಳಿರತಕ್ಕಂಥಾದ್ದು ಗಡಿಗಳಿಗೆ ಹೊಂದಿಕೊಂಡಿರತಕ್ಕಂಥ ಗ್ರಾಮಗಳು ಏನಿವೆ ಅವು ಪಕ್ಕದ ರಾಜ್ಯಗಳಿಗಿಂತ ಆರ್ಥಿಕವಾಗಿ, ಸಾಮಾಜಿಕವಾಗಿ ಹೆಚ್ಚಿಗೆ ಬೆಳವಣಿಗೆ ಆಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ನಮ್ಮ ಮಾನ್ಯ ಸದಸ್ಯರು ಇನ್ನು ಕೆಲವು ಸಲಹೆಗಳನ್ನು ಕೊಟ್ಟರೆ ಅದನ್ನೂ ಸಹ ಅಳವಡಿಸಿಕೊಂಡು ಸರ್ಕಾರ ಕಾರ್ಯಕ್ರಮ ರೂಪಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಬರುತ್ತಿದ್ದಾರೆ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಗಡಿ ಪ್ರದೇಶ ಅಭಿವೃದ್ಧಿಗೆ ವರ್ಷಕ್ಕೆ ನೀವು ಕೇವಲ ಒಂದಷ್ಟು ಹಣ ಕೊಟ್ಟು ಬಿಟ್ಟರೆ ಪರಿಸ್ಥಿತಿ ಬಗೆಹರಿಯುವುದಿಲ್ಲ. ಗಡಿ ಅಭಿವೃದ್ಧಿ ಬೆಳವಣಿಗೆಗೆ ವಿಶೇಷವಾಗಿ ಭಾಷೆ ಬಾಂದವ್ಯ, ಅಲ್ಲಿ ಭಾಷೆ ಬೆಳವಣಿಗೆ ಆಗಬೇಕು. ಅಲ್ಲಿ ಅನೇಕ ಕನ್ನಡ ಶಾಲೆಗಳು ಬಹಳ ದುಸ್ಥಿತಿಯಲ್ಲಿವೆ. ಆ ಶಾಲೆಗಳ ಬೆಳವಣಿಗೆಗೆ ತಾವು ಏನು ಮಾಡಿದ್ದೀರ ಎನ್ನತಕ್ಕಂಥಾದ್ದು ಒಂದು. ಇದರ ಜೊತೆಗೆ ಈ ಗಡಿ ಪ್ರಶ್ನೆ ಬಂದಾಗ, ಹೊರನಾಡಿನಲ್ಲಿರತಕ್ಕಂಥ ನಮ್ಮ ಕರ್ನಾಟಕ ಭಾಗಗಳು ಎಂದರೆ ಕಾಸರಗೋಡು ಇದೆ, ತಾಳವಾಡಿ ಇದೆ, ಅಕ್ಕಲಕೋಟೆ ಇದೆ, ಆಡ್ವಾನಿ ಇದೆ, ಅಲೂರು ಇದೆ ಮತ್ತು ಉದಕಮಂಡಲ ಇದೆ. ಮತ್ತು ಇಲ್ಲಿರತಕ್ಕಂಥ ಕನ್ನಡ ಶಾಲೆಗಳನ್ನು ಸಂಪೂರ್ಣವಾಗಿ ಮುಚ್ಚಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಕಾಸರಗೋಡಿನಲ್ಲಂತೂ ಸಂಪೂರ್ಣವಾಗಿ ಕನ್ನಡ ಶಾಲೆಗಳನ್ನು ಮುಚ್ಚಿದ್ದಾರೆ. ಇಂತಹ ಅನೇಕ ಕಷ್ಟದ ಪರಿಸ್ಥಿತಿಯಲ್ಲಿ, ಪಕ್ಕದ ರಾಜ್ಯದಲ್ಲಿರತಕ್ಕಂಥ ಕನ್ನಡ ಪ್ರದೇಶಗಳು ಅನೇಕ ತೊಂದರೆಗಳನ್ನು ಅನುಭವಿಸುತ್ತಿರುವಾಗ ನಮ್ಮ ಸರ್ಕಾರ ಈ ಬಗ್ಗೆ ನೆರೆ ರಾಜ್ಯದ ಸರ್ಕಾರದ ಜೊತೆ ಏನು ಮಾತುಕತೆ ಮಾಡಿದೆ? ಆ ಕನ್ನಡ ಶಾಲೆಗಳನ್ನು ಮುಚ್ಚಿರುವ ಬಗ್ಗೆ ನಿಮ್ಮ ನಿರ್ಧಾರ ಏನು? ಈ ಬಗ್ಗೆ ಅಲ್ಪಸಂಖ್ಯಾತ ಭಾಷೆಯನ್ನು ಮಾತನಾಡತಕ್ಕಂಥ ಕನ್ನಡ ಭಾಷೆಯವರಿಗೆ ಎಷ್ಟು ರಕ್ಷಣೆಯನ್ನು ಕೇಂದ್ರ ಸರ್ಕಾರ ಕೊಟ್ಟಿದೆ? ಈ ಬಗ್ಗೆ ತಮ್ಮ ನಿಲುವೇನು? ಇದು ಬಹಳ ಸ್ಪಷ್ಟ ಆಗಬೇಕು. ಏಕೆಂದರೆ ವರ್ಷಕ್ಕೆ ಒಂದು ಸಾರಿ 5ಕೋಟಿ ನಮಗೆ ಕೊಟ್ಟಿದ್ದು, 10 ಕೋಟಿ ಕೊಟ್ಟು 15 ಕೋಟಿ ಕೊಟ್ಟು, ಶಾಲೆ ಕಟ್ಟಡ ಕಟ್ಟಿ ಅಲ್ಲಿ ರಸ್ತೆ ಮಾಡಿದರೆ ಅದು ಅಷ್ಟು ಸಮಂಜಸವಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮೂಲಕ ಹೇಳುತ್ತೇನೆ. ಈ ಬಗ್ಗೆ ನಾನು ತಮಗೆ ಹಿಂದೆ ಹೇಳಿದ್ದೆ. ಗಡಿ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿ ಒಂದು ಹೊಸ ರೂಪವನ್ನು ಕೊಟ್ಟು ನಮ್ಮ ಗಡಿ ಪ್ರದೇಶದಲ್ಲಿ ಭಾಷೆಯ ಬೆಳವಣಿಗೆಗೆ ಹೆಚ್ಚು ಒತ್ತು ಕೊಡಬೇಕು ಎನ್ನತಕ್ಕಂಥಾದ್ದು ಒಂದು. ಮತ್ತು ಹೊರನಾಡಿನಲ್ಲಿರತಕ್ಕಂಥ ಕನ್ನಡ ಪ್ರದೇಶಗಳ ಬಗ್ಗೆ ನಾನು ಆಗಲೇ ತಮಗೆ ತಿಳಿಸಿದ್ದೇನೆ. ತಾವು ಮುಖ್ಯಮಂತ್ರಿಗಳು ಬಂದಿದ್ದೀರಿ. ನನ್ನದೇನೂ ಅಭ್ಯಂತರ ಇಲ್ಲ. ಅವರೇ ಉತ್ತರ ಕೊಡಲಿ. ತಾವು ಈ ಬಗ್ಗೆ ಏನು ನಿಲುವು ತೆಗೆದುಕೊಂಡಿದ್ದೀರಿ ಎಂದು ತಮ್ಮಲ್ಲಿ ಅತ್ಯಂತ ಪ್ರಾಮಾಣಿಕವಾಗಿ ನಾನು ಕೇಳುತ್ತಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ ಏನಾಗಿದೆ ಎಂದರೆ, ನಮ್ಮ ಔರಾದ್ ತಾಲ್ಲೂಕಿನ ಉದಾಹರಣೆ ಹೇಳುತ್ತೇನೆ. ಅದು ಬಾರ್ಡರ್ ಏರಿಯಾ. ಮಹಾರಾಷ್ಟ್ರದವರು ಆಂಧ್ರಪ್ರದೇಶದವರು ಅಷ್ಟು ಚೆನ್ನಾಗಿ ಮಾಡಿದ್ದಾರೆ. ಅವರ ಬಾರ್ಡರ್ ಏರಿಯಾದಲ್ಲಿ ಶಾಲೆ ಇದೆ. ಕಟ್ಟಡ ಇದೆ, ಅಷ್ಟೇ ಅಲ್ಲ, ಅಂಗನವಾಡಿ

ಕೇಂದ್ರಗಳು ಇವೆ. ಎಲ್ಲಾ ರೀತಿಯಲ್ಲಿ ಅಭಿವೃದ್ಧಿ ಆಗಿದೆ. ಆದರೆ ನಮ್ಮಲ್ಲಿ ಇನ್ನು ರೋಡ್ಸ್ ಪೂರ್ತಿ ಆಗಿಲ್ಲ, ಅಲ್ಲಿ ಕೋಡ್ ಇಲ್ಲ, ಬ್ರಿಡ್ಜ್ ಇಲ್ಲ, ಆ ಕಡೆ ನೋಡಿದವರೆ ನಮ್ಮವರು ನಾಚಿಕೆ ಪಡುತ್ತಾರೆ. ನಮ್ಮ ಗತಿ ಏನಾಗಿದೆ ಎಂದರೆ ಅಧೋಗತಿಗೆ ಇಳಿದಿದ್ದೇವೆ. ಅಲ್ಲಿ ಚಿನ್ನಾಗಿ ಮಾಡಿದ್ದಾರೆ. ನೀವು 15 ಕೋಟಿ ಕೊಟ್ಟಿರಿ, 20 ಲಕ್ಷ, 10 ಲಕ್ಷ, 5 ಲಕ್ಷ ಕೊಡುತ್ತಿದ್ದೀರಿ. ಜಿಲ್ಲಾಧಿಕಾರಿಗಳನ್ನು ಕೇಳಿದಿರೆ ಅಷ್ಟೊಂದು ಗ್ರ್ಯಾಂಟ್ ಇಲ್ಲ ಒಂದು ಕಿಲೋಮೀಟರ್ ತೆಗೆದುಕೊಳ್ಳಿ, ಅರ್ಧ ಕಿಲೋಮೀಟರ್ ತೆಗೆದುಕೊಳ್ಳಿ ಅಥವಾ ಶಾಲೆ ಅಂದರೆ ಶಾಲೆಗೆ ದುಡ್ಡು ಇಲ್ಲ ಎಂದು ಹೇಳುತ್ತಾರೆ. ನಿಮಗೆ ನಿಜವಾಗಿ ಬಾರ್ಡರ್ ಏರಿಯಾವನ್ನು ಡೆವಲಪ್‌ಮೆಂಟ್ ಮಾಡಬೇಕೆನ್ನುವ ಉದ್ದೇಶ ಇದೆಯೋ ಇಲ್ಲವೋ ಎನ್ನುವುದನ್ನು ದಯವಿಟ್ಟು ತಾವು ತಿಳಿಸಬೇಕು. ಈ ಬಗ್ಗೆ ಏನಾದರೂ ಶಾಶ್ವತವಾದ ಯೋಜನೆಗಳನ್ನು ಹಾಕಿಕೊಳ್ಳಬೇಕು.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಅಧ್ಯಕ್ಷರೇ, 52 ತಾಲ್ಲೂಕುಗಳನ್ನು ಸೇರಿಸಿದ್ದಾರೆ. ಇದರಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ ಏನು ಹೇಳಿದ್ದಾರೆ ಎಂದರೆ ಪ್ರತಿ ವರ್ಷ ಅಂದರೆ 1992-93 ಮತ್ತು 1993-94ರಲ್ಲಿ 15 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಈ ಹಣ ಕೊಟ್ಟಿದ್ದರಲ್ಲಿ ಏನಾಗಿದೆ ಅಂದರೆ, ಕಳೆದ ವರ್ಷ ನನಗೆ ಅನುಭವ ಇದೆ. ನನ್ನ ತಾಲ್ಲೂಕು ಬಾರ್ಡರ್‌ತಾಲ್ಲೂಕಿಗೆ ಬರುತ್ತದೆ. ಹಣ ಬಿಡುಗಡೆ ಮಾಡುವುದಿಲ್ಲ. ಎಲ್.ಒ.ಸಿ. ಕೊಡುವುದಿಲ್ಲ. ಅಲ್ಲಿ ಕೆಲಸ ಮಾಡಿದವರಿಗೆ ಹಣ ಕೊಡದೆ ಅವರು ಯಾರೂ ಈಗ ಕೆಲಸಮಾಡುತ್ತಿಲ್ಲ. ಏಕೆಂದರೆ ಶಾಲಾ ಕಟ್ಟಡಗಳು ಬರುತ್ತವೆ, ಪಿ ಎಚ್ ಯು ಗಳು ಬರುತ್ತವೆ, ಮತ್ತೆ ಮಿನಿವಾಟರ್ ಸಪ್ಲೈ ಬರುತ್ತದೆ. ಅಂಗನವಾಡಿಗಳು ಬರುತ್ತವೆ. ರಸ್ತೆಗಳು ಬರುತ್ತವೆ. ಎಲ್ಲಾ ಕೆಲಸಗಳನ್ನು ಮಾಡಿಸಿರುತ್ತಾರೆ. ಇವುಗಳಿಗೆ ಹಣ ಕೊಡದೆ ಕಳೆದ ವರ್ಷದಲ್ಲಿ ನಾವೇ ಕಂಟ್ರಾಕ್ಟ್ ಮಾಡಿಸಿದಂತೆ ನಾವು ಶಾಸಕರಾದಂತಹವರು ಒತ್ತಡ ತಂದು ಅವರಿಗೆ ಹಣ ಕೊಡಿಸುವುದಕ್ಕೆ ಪ್ರಯತ್ನ ಮಾಡಿದೆವು. ಆದ್ದರಿಂದ ಹಣವನ್ನು ನೀವು ಸಕಾಲದಲ್ಲಿ ಬಿಡುಗಡೆ ಮಾಡಿದರೆ ಕೆಲಸಗಳು ಆಗುತ್ತವೆ. ಹಣ ಇಲ್ಲದೆ ನೀವು ಕೆಲಸ ಮಾಡಿ ಎಂದರೆ ಹೇಗೆ ಮಾಡುವುದಕ್ಕೆ ಆಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತೆ ಸನ್ಮಾನ್ಯ ಗುರುಪಾದಪ್ಪನವರು ಹೇಳಿದಂತಹ ಪ್ರಶ್ನೆ ಅದು ಒಂದು ಭಾಗ ಮತ್ತೆ ಸನ್ಮಾನ್ಯ ಚಿಕ್ಕೇಗೌಡರು ಗಡಿಗೆ ಸಂಬಂಧಿಸಿದ್ದು ಅಲ್ಲ ಜನರಲ್ ಆಗಿ ಸಾಮಾನ್ಯವಾಗಿ ಇರತಕ್ಕಂಥ ಸಮಸ್ಯೆ. ಅದೂ ಗಡಿಸಮಸ್ಯೆ ಆಯಿತು. ಸನ್ಮಾನ್ಯ ಮೂರೂ ಜನ ಸದಸ್ಯರು ಹೇಳಿದಂತಹ ವಿಚಾರಗಳಲ್ಲಿ ಕೆಲವು ಮೂಲಭೂತ ಅಂಶಗಳು ಇವೆ. ಇದರಲ್ಲಿ ಎರಡು ಭಾಗ ಇದೆ. ಈಗ ಗಡಿ ಪ್ರದೇಶದ ಅಭಿವೃದ್ಧಿ ಎಂದು ಹೇಳಿದರೆ ಅದು ನಮ್ಮ ಕರ್ನಾಟಕದ ಗಡಿಯ ಒಳಗೆ ಇರತಕ್ಕಂಥ ಜಾಗದ ಅಭಿವೃದ್ಧಿಗೆ ಸೀಮಿತವಾಗಿರತಕ್ಕಂಥ ಕಾರ್ಯಕ್ರಮ.ಗಡಿ ದಾಟಿ ಹೊರ ರಾಜ್ಯಗಳಿಗೆ ಸಂಬಂಧಪಟ್ಟಂತಹ ಕಾರ್ಯಕ್ರಮ ಅಲ್ಲ. ಇದಕ್ಕೆ ಸೀಮಿತವಾಗಿ ಅಲ್ಲಿ ಏನು ಕಾರ್ಯಕ್ರಮ ಮಾಡಬೇಕು ಎಂದು ತಮಗೆ ಗೊತ್ತಿದೆ. ನಾವು ಸಂಪೂರ್ಣ ಅಧಿಕಾರ ಶಾಸಕರಿಗೆ ಕೊಟ್ಟಿದ್ದೇವೆ. ಅವರು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಆದ್ಯತೆ ಪಟ್ಟಿ ಕೊಡುತ್ತಾರೆ ಬಹಳ ಮಟ್ಟಿಗೆ ಜಿಲ್ಲಾಧಿಕಾರಿಗಳು ಅದನ್ನೇ ಒಪ್ಪಿಕೊಳ್ಳುತ್ತಾರೆ. ತಾವು ಆದ್ಯತಾ ಪಟ್ಟಿಯನ್ನು ಮಾಡುವಾಗ ಮಾತ್ರ ಇಂತಹ ಕೆಲವು ಕಾರ್ಯಕ್ರಮಗಳನ್ನು ತಾವು ಹೇಳಿದರೆ ಶಾಲೆ ವಿಚಾರ, ಮತ್ತೆ ರಸ್ತೆ ವಿಚಾರ. ಒಂದು ಕಿಲೋಮೀಟರ್ ಪರವಾಗಿಲ್ಲ ಹೆಚ್ಚು ತೆಗೆದುಕೊಳ್ಳಿ ತಾವು ಯಾರು ಅಡ್ಡಿ ಬರುವುದಿಲ್ಲ. ನಿಮ್ಮ ಅಲೋಕೇಶನ್‌ಗೆ ಸಂಬಂಧಪಟ್ಟಿದ್ದುದು.

ನಿಮ್ಮ ನಿಮ್ಮ ತಾಲ್ಲೂಕಿಗೆ ಗಡಿ ಪ್ರದೇಶಕ್ಕೆ 25 ಲಕ್ಷ ಇದೆ. 25 ಲಕ್ಷ ಕಾರ್ಯಕ್ರಮಗಳಿಗೆ ಈ ವರ್ಷ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು, ಬರುವ

ವರ್ಷ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ತಾವು ಮಾಡಿದರೆ ಈ ಸಮಸ್ಯೆ ಉದ್ಭವವಾಗುವುದಿಲ್ಲ. ತಮ್ಮ ಭಾಗದಲ್ಲಿ ಹೈದ್ರಾಬಾದ್-ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಇದೆ. ಅದರಲ್ಲಿ ಕೂಡ ತಮ್ಮ ಡಿಸ್‌ಕ್ರಿಶನ್ ಇದೆ. ಆ ಕಾರ್ಯಕ್ರಮವನ್ನು ಕೂಡ ಇದರ ಜೊತೆಗೆ ತೆಗೆದುಕೊಂಡು ಯಾವ ಯಾವದನ್ನು ಮಾಡಬೇಕೋ ಅದನ್ನು ಆದ್ಯತೆ ಮೇಲೆ ಮಾಡಲಿಕ್ಕೆ ಸಾಧ್ಯ ಇದೆ. ಇದು ಒಂದು ಭಾಗ. ಎರಡನೇ ಭಾಗ. ತಾವು ಏನು ಹೇಳಿದಿರಿ ಎಂದರೆ ಹೊರರಾಜ್ಯದಲ್ಲಿ ಕನ್ನಡ ಮಾತನಾಡತಕ್ಕಂಥ ಜನ ಅಲ್ಲಿರತಕ್ಕಂಥ ಕನ್ನಡ ಶಾಲೆಗಳಿಗೆ ತೊಂದರೆ ಆಗುತ್ತದೆ ಎಂದು ಹೇಳಿದಿರಿ. ಅದಕ್ಕೆ ಈ ವರ್ಷದ ಬಜೆಟ್‌ನಲ್ಲಿ ಕನ್ನಡಸಂಸ್ಕೃತಿ ವಿಭಾಗದಿಂದ ಸ್ವಲ್ಪ ಹಣ ನಾವೂ ಇಟ್ಟಿದ್ದೇವೆ. ಹೊರ ರಾಜ್ಯಗಳಲ್ಲಿ ಕನ್ನಡ ಶಾಲೆ ಎಲ್ಲೆಲ್ಲಿ ಇದೆ, ಅಲ್ಲಿ ನಾವು ಅವರಿಗೆ ಫರ್ನೀಚರ್ ಕೊಡತಕ್ಕಂಥಾದ್ದು ಅದಕ್ಕೆ ಬೇಕಾದಂತಹ ಕೆಲವು ಸಲಕರಣೆಗಳನ್ನು ಕೊಡತಕ್ಕಂಥಾದ್ದು ನನ್ನ ದೃಷ್ಟಿಯಲ್ಲಿ ಸ್ವಲ್ಪ ಅನುದಾನದ ವ್ಯವಸ್ಥೆಯನ್ನು ಕೂಡ ಕ್ರಮೇಣ ಮಾಡಬೇಕು ಎನ್ನುವುದು ಸರ್ಕಾರದ ಅಪೇಕ್ಷೆ ಇದೆ. ಏಕೆಂದರೆ, ಅನೇಕ ಬಾರಿ ಮಕ್ಕಳ ಸಂಖ್ಯೆ ಕಡಿಮೆ ಆದಾಗ ಕನ್ನಡ ಶಾಲೆ ಮುಚ್ಚಿಸಿಬಿಡುತ್ತಾರೆ. ನಾನು ತಿಳಿದುಕೊಂಡೆ. ಹೊರ ರಾಜ್ಯದ ಸರ್ಕಾರದ ಯಾವುದೇ ಒಂದು ಕಾರ್ಯಕ್ರಮದಿಂದ ಅಲ್ಲ. ಆದರೆ ಶಾಲೆಗೆ ಬರುವ ಮಕ್ಕಳು ಕಡಿಮೆಯಾದ ಕೂಡಲೇ ನಿಗದಿತ ಸಂಖ್ಯೆಯು ಸಾಕಾಗುವುದಿಲ್ಲ ಎಂದು ಶಾಲೆಗಳನ್ನು ಮುಚ್ಚುತ್ತಾರೆ. ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಯವರೊಡನೆ ಅಂದರೆ ಮಾನ್ಯ ಶರದ್‌ಪವಾರ್‌ರವರ ಜೊತೆಗಗೂ ಕೂಡ ಮಾತನಾಡಿದ್ದೇನೆ. ಹಾಗೆಯೇ ಆಂಧ್ರಪ್ರದೇಶದ ಮುಖ್ಯಮಂತ್ರಿಯವರ ಜೊತೆಗೂ ಕೂಡ ಮಾತನಾಡಿದ್ದೇನೆ. ಕನ್ನಡ ಶಾಲೆಗಳು ನಿಮ್ಮ ನಿಮ್ಮ ಸರಕಾರದ ಧೋರಣೆಯಿಂದ ನಿಲ್ಲಬಾರದು. ಅಲ್ಲಿ ಕನ್ನಡ ಶಾಲೆಗಳನ್ನು ನಡೆಸುವುದಕ್ಕೆ ಬೇಕಾದರೆ ನಾವು ಕೂಡ ಸ್ವಲ್ಪ ಸಹಾಯ ಮಾನ್ಯ ಸಚಿವ ಮಂಜುನಾಥರವರು ಉತ್ತರ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈಗಾಗಲೇ ಗಡಿ ಪ್ರದೇಶಗಳಲ್ಲಿನ ಶಾಲೆಗಳನ್ನು ಸಮಗ್ರವಾಗಿ ಮುಚ್ಚಿಬಿಟ್ಟಿದ್ದಾರೆ. ಆದ್ದರಿಂದ ಅಲ್ಲಿನ ಮುಖ್ಯಮಂತ್ರಿಯವರ ಜೊತೆಯಲ್ಲಿ ತಾವು ಮಾತುಕತೆಯಾಡಿ, ಅಲ್ಲಿನ ಕನ್ನಡ ಶಾಲೆಗಳನ್ನೂ ತೆಗೆಯುವುದಕ್ಕೆ ಕ್ರಮಕೈಗೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ, ಕಾಸರಗೋಡಿನಲ್ಲಿ ಕನ್ನಡ ಶಾಲೆಗಳನ್ನು ಮುಚ್ಚಿದ್ದಾರೆ, ಈ ಬಗ್ಗೆ ನಾವು ಅನೇಕ ಸಾರಿ ಒತ್ತಾಯ ಮಾಡಿದ್ದೇವೆ. ಆದರೂ ಅವರು ಇವೊತ್ತು ಶಾಲೆಗಳನ್ನು ತೆರೆಯುತ್ತಾ ಇಲ್ಲ. ಸೊಲ್ಲಾಪುರದ ಪರಿಸ್ಥಿತಿಯೂ ಕೂಡ ಇದೇ ಆಗಿದೆ. ಅಲ್ಲಿಯೇ ಒಬ್ಬ ಮಹನೀಯ ಕಲ್ಯಾಣ ಶೆಟ್ಟಿಯವರು ಪಾಪ, ಹಗಲೂ ರಾತ್ರಿ, ಮೊದಲಿಂದಲೂ ಸುಮಾರು 40 ವರ್ಷಗಳ ಕಾಲ ಗಡಿನಾಡ ಬಗ್ಗೆ ಹೋರಾಟ ಮಾಡಿಕೊಂಡು ಬಂದಿದ್ದಾರೆ. ತಮ್ಮಲ್ಲಿಯೂ ಬಂದು ಭೇಟಿಯಾಗಿ ತಮ್ಮ ಮನವಿಗಳನ್ನು ಕೊಟ್ಟಿದ್ದಾರೆ. ಈ ರೀತಿಯಾಗಿ ಹೊರನಾಡುಗಳಲ್ಲಿನ ಕನ್ನಡ ಶಾಲೆಗಳನ್ನು ಸಂಪೂರ್ಣವಾಗಿ ರದ್ದು ಮಾಡಿದ್ದಾರೆ. ಈ ಬಗ್ಗೆ ತಮ್ಮ ಸ್ಪಷ್ಟ ನಿಲುವನ್ನು ಹೇಳಬೇಕು. ಹಾಗೆಂದು ನಾನು ತಮ್ಮಲ್ಲಿ ಕಳಕಳಿಯ ಮನವಿಯನ್ನು ಮಾಡಿಕೊಳ್ಳುತ್ತೇನೆ. ಅದನ್ನು ಬಿಟ್ಟು ನಮ್ಮಲ್ಲಿ ಮಾತ್ರ ಎಲ್ಲರಿಗೂ ಅನುಕೂಲ ಮಾಡಿಕೊಡತಕ್ಕಂಥಾದ್ದು, ಹೊರನಾಡಿನಲ್ಲಿರತಕ್ಕಂಥ ಕನ್ನಡ ಶಾಲೆಗಳಿಗೆ ಆಗತಕ್ಕಂಥ ಅನ್ಯಾಯವನ್ನು ತಡೆಗಟ್ಟಲು ನಾವು ಸಂಪೂರ್ಣವಾಗಿ ವಿಫಲರಾದರೆ ಅದರಿಂದ ಸಹಜವಾಗಿ ನೋವು ಉಂಟಾಗುತ್ತದೆಯಾದ ಕಾರಣ ಈ ಬಗ್ಗೆ ಒಂದು ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮುಖ್ಯಮಂತ್ರಿಯವರಲ್ಲಿ ನನ್ನ ಮನವಿ ಏನೆಂದರೆ, ನಾವು ಈಗ 1993-94 ರಲ್ಲಿದ್ದೇವೆ. 1992-93 ರಲ್ಲಿ ಇದಕ್ಕೋಸ್ಕರ ಎಂಟು ಗಡಿಭಾಗದ ಕ್ಷೇತ್ರಗಳಿಗೆ ಪ್ರತಿಯೊಂದಕ್ಕೂ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದೇ ರೀತಿ ಬಹುತೇಕ ಎಲ್ಲಾ ಕಡೆಗಳಲ್ಲಿಯೂ ಕೆಲಸಗಳನ್ನು ಮಾಡಿದ್ದಾರೆ.

ಆದರೆ ದುಡ್ಡು ಸರಿಯಾಗಿ ರಿಲೀಸ್ ಆಗಿಲ್ಲ. ಇವತ್ತು 8 ರಿಂದ 10 ಲಕ್ಷ ರೂಪಾಯಿಗಳ ಪೆಂಡಿಂಗ್ ಬಿಲ್ಸ್ ಇವೆ. ಆ ಹಣವನ್ನು ತತ್‌ಕ್ಷಣ ರಿಲೀಸ್ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಹಾಗೆ ಬಾಕಿ ಇದ್ದರೆ ಅದನ್ನು ರಿಲೀಸ್ ಮಾಡಲು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ. ಹಾಗೆಯೇ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಪ್ರಕಾರ ಏನಾದರೂ ಸಮಸ್ಯೆಗಳು ಇದ್ದರೆ ಅವುಗಳ ಬಗ್ಗೆ ನಾನು ಪ್ರತ್ಯೇಕ ಅಧ್ಯಯನ ಮಾಡಿಸುತ್ತೇನೆ. ಆದರೆ ನಾನು ಆ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಮಾತನಾಡುವಾಗ ನಮ್ಮಿಂದ ಯಾವ ತೊಂದರೆಯೂ ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ ನಮ್ಮ ಅಧಿಕಾರಿಗಳನ್ನು ಆ ಭಾಗಕ್ಕೆ ಕಳುಹಿಸಿ ಎಲ್ಲೆಲ್ಲಿ ಯಾವ ಕಾರಣಕ್ಕಾಗಿ ಶಾಲೆಗಳು ಬಂದ್ ಆಗಿವೆ, ಎಲ್ಲಾದರೂ ಸಂಪನ್ಮೂಲದ ಕೊರತೆಯಿಂದ ಬಂದ್ ಆಗಿದ್ದರೆ, ಅದಕ್ಕೆ ಯಾವ ರೀತಿಯಲ್ಲಿ ಸಹಾಯ ಮಾಡಲು ಆಗುತ್ತದೆ ಅಥವಾ ಆಯಾ ರಾಜ್ಯ ಸರಕಾರಗಳ ನೀತಿಯಿಂದ ಆಗಿದ್ದರೆ ಆ ಬಗೆಗಿನ ವರದಿಯನ್ನು ತರಿಸಿ, ಅದರ ಮಾಹಿತಿಗಳನ್ನು ಸ್ಪಷ್ಟವಾಗಿ ತಿಳಿದುಕೊಂಡು, ನಾನೇ ಹೋಗಿ ಸಂಬಂಧಪಟ್ಟ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ.

ಮುಂಡರಗಿ ತಾಲ್ಲೂಕಿನಲ್ಲಿ ಏತನೀರಾವರಿಯ ಪ್ರದೇಶ

579 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿರುವ ಪ್ರತಿಯೊಂದು ಏತ ನೀರಾವರಿ ಕ್ಷೇತ್ರವೆಷ್ಟು ಅದರಲ್ಲಿ ಈಗ ಸದ್ಯ ನೀರು ಪೂರೈಸುವ ಏತ ನೀರಾವರಿಗಳ ಕ್ಷೇತ್ರವೆಷ್ಟು ಹಾಗೂ ಪ್ರತಿಯೊಂದು ಏತ ನೀರಾವರಿಯಲ್ಲಿ ಈ ಕ್ಷೇತ್ರಕ್ಕೆ ನೀರು ಪೂರೈಕೆ ಆಗದೇ ಇರಲು ಕಾರಣವೇನು?

ಆ) ಕಕ್ಕೂರು 2 ನೇ ಹಂತವನ್ನು ಯಾವಾಗ ಪೂರ್ತಿ ಮಾಡಲಾಗುತ್ತದೆ? ಅದಕ್ಕೆ ಬಿಡುಗಡೆಯಾದ ಹಣವೆಷ್ಟು? ಎಂದಿನಿಂದ ಅದರ ಕೆಲಸ ಪ್ರಾರಂಭವಾಗುವುದು? ಹಾಗೂ ಯಾವಾಗ ಕೆಲಸ ಪೂರ್ಣಗೊಳ್ಳುವುದು?

ಇ) ಶಿಂಗಟಾಲೂರು ಏತ ನೀರಾವರಿ ಯೋಜನೆ ಯಾವಾಗ ಪ್ರಾರಂಭವಾಗಿದ್ದು? ಹಾಗೂ 2ನೇ ಹಂತದ ಕಾರ್ಯ ವಿಳಂಬವಾಗಲು ಕಾರಣವೇನು?

ಈ) ಮುಂಡರಗಿ ತಾಲ್ಲೂಕಿನ ಎಲ್ಲಾ ಏತ ನೀರಾವರಿ ಪಂಪ್‌ಸೆಟ್‌ಗಳ ಅಶ್ವಶಕ್ತಿಯು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೆ ಬಂದಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮವೇನು? ಹಾಗೂ ಮುಂದೆ ನಿಶ್ಚಿತಗೊಳಿಸುವ ಅಶ್ವಶಕ್ತಿಯ ಪಂಪುಸೆಟ್‌ಗಳನ್ನು ಯಾವಾಗ ಪೂರೈಸುತ್ತೀರಿ?

ಡಾ॥ ಆರ್. ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಮುಂಡರಗಿ ತಾಲ್ಲೂಕಿನಲ್ಲಿ 5 ಏತ ನೀರಾವರಿ ಯೋಜನೆಗಳು ಕಾರ್ಯಾಚರಣೆಯಲ್ಲಿದ್ದು ಇವುಗಳ ಉದ್ದೇಶಿತ ಮೂಲ ಅಚ್ಚುಕಟ್ಟು 1990 ಹೆಕ್ಟೇರುಗಳು. ಈ ಯೋಜನೆಗಳಿಂದ ನೀರಾವರಿ ಆಗುತ್ತಿರುವ ಅಚ್ಚುಕಟ್ಟು 687 ಹೆಕ್ಟೇರುಗಳು. ಈ ಯೋಜನೆಗಳ ಯಂತ್ರೋಪಕರಣಗಳು ಹಳೆಯದಾಗಿದ್ದು ಪದೇ ಪದೇ ದುರಸ್ತಿಗೆ ಬರುತ್ತಿದ್ದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಾಯ ಮತ್ತು ಕಡಿಮೆ ಓಲ್ಟೇಜ್ ಇರುವುದೇ ಉದ್ದೇಶಿತ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಆಗದೆ ಇರುವ ಕಾರಣಗಳು.

ಆ) ಕಕ್ಕೂರು 2ನೇ ಹಂತದ ಏತ ನೀರಾವರಿ ಯೋಜನೆಯು ಡಿ.ಪಿ.ಎ.ಪಿ. ಶೀರ್ಷಿಕೆಯಲ್ಲಿ ಅನುದಾನ ಬಿಡುಗಡೆಯಾಗದ ಕಾರಣ ಸ್ಥಗಿತಗೊಂಡಿದೆ. ಈಗಾಗಲೇ ಯೋಜನೆಗೆ 25.90 ಲಕ್ಷ ರೂ.ಗಳು ಬಿಡುಗಡೆಯಾಗಿ ವೆಚ್ಚವಾಗಿದೆ. ಯೋಜನೆಯನ್ನು